ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಹ.ಜಾ.ಶಿ/2010-11 ದಿನಾಂಕ: 24-06-2010

## ಸುತ್ತೋಲೆ

**ವಿಷಯ:** ಹದಿಹರೆಯದ ಜಾಗೃತಿ ಶಿಬಿರಗಳನ್ನು ಸ.ಶಿ.ಅ. ವತಿಯಿಂದ ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ:** 1. 2010-11 ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನದ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆ

2. ದಿನಾಂಕ: 11, 12-01-2010 ರಂದು ರಾಜ್ಯ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಡಿವೈಪಿಸಿ ಸಭೆ ನಡವಳಿಗಳು.

******

ಮೇಲಿನ ವಿಷಯ ಹಾಗೂ ಉಲ್ಲೇಖಗಳನ್ವಯ, 2010-11 ನೇ ಸಾಲಿನಲ್ಲಿ ಹದಿಹರೆಯದ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲು 'ಅಲ್ಪಸಂಖ್ಯಾತ ಸಮುದಾಯ'ದ ಶೀರ್ಷಿಕೆಯಡಿ ಪ್ರತಿ ಜಿಲ್ಲೆಗೆ ರೂ. 2.74 ಲಕ್ಷ ಹಾಗೂ 'ನಗರ ವಂಚಿತ ಮಕ್ಕಳು' (Urban Deprived Children) ಶೀರ್ಷಿಕೆಯಡಿ ಪ್ರತಿ ಜಿಲ್ಲೆಗೆ ರೂ. 2.75 ಲಕ್ಷದಂತೆ ಪ್ರತಿ ಜಿಲ್ಲೆಗೆ ಒಟ್ಟು ರೂ. 5.49 ಲಕ್ಷ ಅನುದಾನ ಅನುಮೋದಿತವಾಗಿದೆ.

ಉಲ್ಲೇಖ-2 ರ ಸಭೆಯಲ್ಲಿ ಚರ್ಚಿಸಿದಂತೆ ಸರ್ಕಾರೇತರ ಸಂಸ್ಥೆಗಳು ಕೈಗೊಳ್ಳುತ್ತಿರುವ ಜಾಗೃತಿ ಶಿಬಿರಗಳು ನಿರೀಕ್ಷಿತ ಮಟ್ಟದಷ್ಟು ಪರಿಣಾಮಕಾರಿಯಾಗಿಲ್ಲದಿರುವುದನ್ನು ಗಮನಿಸಿ, ಹದಿಹರೆಯದ ಬಾಲಕಿಯರ ಜಾಗೃತಿ ಶಿಬಿರಗಳನ್ನು ಸ.ಶಿ.ಅ. ವತಿಯಿಂದ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಪ್ರಯುಕ್ತ, ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲು ಅಗತ್ಯವಾದ ಸಂಪನ್ಮೂಲ ಸಾಹಿತ್ಯವನ್ನು ಸಿದ್ಧಪಡಿಸಿ, ಮುದ್ರಿಸಿ, ಜಿಲ್ಲೆಗಳಿಗೆ ಒದಗಿಸಲಾಗುತ್ತದೆ. ಈ ಸಂಬಂಧ ವಿವರವಾದ ಮಾರ್ಗಸೂಚಿಯನ್ನು ಹೊರಡಿಸಲಾಗುತ್ತದೆ. ಆದ್ದರಿಂದ ಹದಿಹರೆಯದ ಜಾಗೃತಿ ಶಿಬಿರಗಳಿಗಾಗಿ ಮೀಸಲಾದ ಅನುದಾನವನ್ನು ಈ ಕಛೇರಿಯ ಸೂಚನೆ ಬರುವವರೆಗೂ ವೆಚ್ಚ ಮಾಡದಿರಲು ಸೂಚಿಸಿದೆ.

(ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ
ಅದೇಶಾನುಸಾರ)

ನಿರ್ದೇಶಕರು (ಕಾರ್ಯಕ್ರಮ)
~~ಸರ್ವ~~ ಶಿಕ್ಷಣ ಅಭಿಯಾನ

**ಪ್ರತಿಗಳು-ಮುಂದಿನ ಕ್ರಮಕ್ಕಾಗಿ**

- ಡಿ.ಡಿ.ಪಿ.ಐ ಹಾಗೂ ಡಿವೈಪಿಸಿಗಳು

**ಮಾಹಿತಿಗಾಗಿ**

- ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA